(ಇಂದು ದಿನಾಂಕ 09-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಎನ್.ಎಚ್. ವಕೀಲರಿಂದಃ**

ದಾವಾ ಸರ್ವೇ ನಂ. ನನ್ನ ತಾಯಿಯವರ ಹೆಸರಿನಲ್ಲಿ ಇದೆ. ಅದಕ್ಕೂ ಪೂರ್ವದಲ್ಲಿ ದಾವಾ ಸರ್ವೇ ನಂ. ನನ್ನ ತಂದೆಯವರ ಹೆಸರಿನಲ್ಲಿ ಇತ್ತು. ನನ್ನ ತಂದೆಯವರ ಕಾಲಾನಂತರದಲ್ಲಿ ನನ್ನ ತಾಯಿಯ ಹೆಸರಿಗೆ ವಾರಸಾನಾತೆಯಿಂದ ಖಾತೆ ಬದಲಾವಣೆ ಆಗಿರುತ್ತದೆ. ನಮ್ಮ ಮನೆಯ ವ್ಯವಹಾರಗಳನ್ನು ನಾನು ನೋಡಿಕೊಳ್ಳುತ್ತೇನೆ. ನನ್ನ ತಾಯಿಯವರಿಗೆ ನ್ಯಾಯಾಲಯಕ್ಕೆ ಹಾಜರಾಗಲು ಹಾಗೂ ಓಡಾಡಲು ತೊಂದರೆ ಇರುತ್ತದೆ. ವಾದಿಗೆ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ. 3 ರಿಂದ 8 ರ ವರೆಗಿನ ದಾಖಲಾತಿಗಳ ಮೂಲ ಪ್ರತಿ ನನ್ನ ಬಳಿ ಇದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವಾ ಸ್ವತ್ತು ಬಿನ್ ಶೆತ್ಗಿ ಸ್ಥಳ ಆಗಿರುತ್ತದೆ. ದಾವಾ ಸ್ವತ್ತನ್ನು ಇ-ಸ್ವತ್ತಿನಡಿಯಲ್ಲಿ ದಾಖಲು ಮಾಡಿದ್ದೀರಿ ಎಂದರೆ ಖಾತೆ ಬದಲಾವಣೆ ಸಂದರ್ಭದಲ್ಲಿ ಇ-ಸ್ವತ್ತು ಚಾಲ್ತಿಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬದ ಮೂಲ ಮನೆ ಹಂಚಿನ ಮಾಳಿಗೆಯ ಮನೆ ಆಗಿತ್ತಾ ಎಂದರೆ ಸಾಕ್ಷಿಯು ಹಂಚು ಹಾಗೂ ಸ್ಲಾಬ್‌ನಿಂದ ಕೂಡಿದ ಮನೆ ಆಗಿತ್ತು ಎಂದು ನುಡಿಯುತ್ತಾರೆ. ಹಾಲಿ ಸದರಿ ಮೂಲ ಮನೆಯ ಛಾವಣಿಯನ್ನು ಆರ್‌ಸಿಸಿ ಯನ್ನಾಗಿ ಮಾರ್ಪಾಡು ಮಾಡಲಾಗಿದೆಯಾ ಎಂದರೆ ಸಾಕ್ಷಿಯು ಕೇವಲ ಒಂದು ಭಾಗವನ್ನು ಮಾತ್ರ ಆರ್‌ಸಿಸಿ ಛಾವಣಿಯನ್ನಾಗಿ ಪರಿವರ್ತಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮೂಲ ಮನೆಯನ್ನು ನೀಲಿ ನಕಾಶೆಯಂತೆ ನವೀಕರಿಸಿ ನಿರ್ಮಾಣ ಮಾಡಿರುತ್ತೇವೆ. ನೀಲಿ ನಕಾಶೆಯ ರೀತ್ಯ ತಳಪಾಯವನ್ನು ಹಾಕಿ ಹೊಸದಾಗಿ ಮನೆಯನ್ನು ಕಟ್ಟಲಾಗಿದೆಯಾ ಎಂದರೆ ಸಾಕ್ಷಿಯು ಕೇವಲ ಒಂದು ಭಾಗವನ್ನು ಮಾತ್ರ ಹೊಸದಾಗಿ ತಳಪಾಯ ಹಾಕಿ ನಿರ್ಮಿಸಲಾಗಿದೆ ಎಂದು ನುಡಿಯುತ್ತಾರೆ. ಹಾಲಿ ಮನೆ ನಿರ್ಮಿಸಿದ ಫೋಟೋಗಳನ್ನು ನಾನು ಹಾಜರುಪಡಿಸಿರುವುದಿಲ್ಲಾ. ಅವಶ್ಯಕತೆ ಇದ್ದಲ್ಲಿ ಹಾಜರುಪಡಿಸುತ್ತೇನೆ.

ಮನೆಯನ್ನು ನಿರ್ಮಿಸಲು ಪರವಾನಿಗೆ ಕೋರಿ ಅರ್ಜಿಯನ್ನು ಯಾವ ದಿನಾಂಕದಂದು ನೀಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ಮನೆಯ ರಿಪೇರಿಯ ಸಲುವಾಗಿ ಪರವಾನಿಗೆ ನೀಡುವಂತೆ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿಯವರು ಷರತ್ತುಗಳೊಂದಿಗೆ ಪರವಾನಿಗೆ ನೀಡುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ.

ನಾನು ನಿರ್ಮಿಸುತ್ತಿರುವಂತಹ ಕಟ್ಟಡ CRZ ವ್ಯಾಪ್ತಿ ಮತ್ತು ಪರಿಸರ ಮಾಲೀನ್ಯ ಆಗದಂತಹ ಪ್ರದೇಶ ಆಗಿದೆಯೋ ಇಲ್ಲವೋ ಎಂದು ಹಾಗೂ ಕಟ್ಟಡ ನಿರ್ಮಾಣ ಪರಿಸರಕ್ಕೆ ಧಕ್ಕೆ ಉಂಟು ಮಾಡುವುದೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಪರವಾನಿಗೆ ನೀಡುತ್ತಾರೆ ಎಂದರೆ ಸರಿ. CRZ ಹಾಗೂ ಪರಿಸರ ಮಾಲೀನ್ಯಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಇಲಾಖೆಗಳಿದ್ದು ಅದರಿಂದ ನಿರಾಕ್ಷೇಪಣಾ ಪತ್ರ ಪಡೆದು ಅರ್ಜಿಯೊಂದಿಗೆ ಪಂಚಾಯಿತಿಗೆ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ . ಸದರಿ

ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಸಂದರ್ಭದಲ್ಲಿ ಮನೆಯ ದುರಸ್ತಿಗೆ ಎಂದು ಕಾರಣವನ್ನು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ನವೀಕರಣ ಎಂದು ನಮೂದಿಸಿರುವುದಾಗಿ ನುಡಿಯುತ್ತಾರೆ.

ನಾನು ಪರವಾನಿಗೆ ಕೋರಿ ಸಲ್ಲಿಸಿದ ಪ್ರಮಾಣ ಪತ್ರದ ರೀತ್ಯ ಪರವಾನಿಗೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಗೋಕರ್ಣದ ರಥದ ಬೀದಿಯಲ್ಲಿ ನಾನು ನಿರ್ಮಾಣ ಮಾಡಿರುವ ಕಟ್ಟಡ ಇದೆ. ರಥದ ಬೀದಿಯಲ್ಲಿ ಶ್ರೀ ಮಹಾಬಲೇಶ್ವರ ದೇವರ ದೇವಾಲಯ ಇದೆ ಎಂದರೆ ಸರಿ. ಶ್ರೀ ಮಹಾಬಲೇಶ್ವರ ದೇವಾಲಯದಿಂದ ನಮ್ಮ ಕುಟುಂಬದ ಮೂಲ ಮನೆ ಎಷ್ಟು ಅಂತರದಲ್ಲಿ ಇದೆ ಎಂದು ಹೇಳಲು ಆಗುವುದಿಲ್ಲ. ಶ್ರೀ ಮಹಾಬಲೇಶ್ವರ ದೇವಾಲಯ ಪುರಾತನ ದೇವಾಲಯ ಆಗಿರುತ್ತದೆ ಎಂದರೆ ಸರಿ. ಶ್ರೀ ಮಹಾಬಲೇಶ್ವರ ದೇವಸ್ಥಾನದ 200 ಮೀಟರ್ ಸುತ್ತಳತೆಯಲ್ಲಿ ಕಟ್ಟಡ ನಿರ್ಮಾಣವನ್ನು ಮಾಡಲು ಪುರಾತತ್ವ ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿಯು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ದೇವಲಯದಿಂದ 200 ಮಿ. ಸುತ್ತಳತೆಯಲ್ಲಿ ಯಾವುದೇ ಕಟ್ಟಡವನ್ನು ಸೂಕ್ತ ಅನುಮತಿ ಇಲ್ಲದೆ ನಿರ್ಮಾಣ ಮಾಡಲು ಅವಕಾಶ ಇರುವುದಿಲ್ಲಾ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯು ನನಗೆ ಪರವಾನಿಗೆ ಪತ್ರವನ್ನು ನೀಡಿದ್ದರು. ಪ್ರತಿವಾದಿಯು ನನಗೆ ಮೊದಲಿಗೆ ನೀಡಿದ್ದ ಪರವಾನಿಗೆಯನ್ನು ರದ್ದುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಂಬಂಧಪಟ್ಟ ಇಲಾಖೆಗಳಿಗೆ ನಿರಾಕ್ಷೇಪಣಾ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ಮನೆಯ ದುರಸ್ತಿಗಾಗಿ ಎಂದು ಕಾರಣವನ್ನು ನಮೂದಿಸಿದ್ದು, ಹೊಸದಾದ ಮನೆಯ ನಿರ್ಮಾಣಕ್ಕಾಗಿ ಎಂದು ಕಾರಣವನ್ನು ನಮೂದಿಸಿರುವುದಿಲ್ಲಾ ಎಂದರೆ ನನಗೆ ಗೊತ್ತಿಲ್ಲ. ಪುರಾತತ್ವ ಇಲಾಖೆಯವರು ಸ್ಥಳ ಪರಿಶೀಲನೆಗೆ ಬಂದ ಬಗ್ಗೆ ನನಗೆ ನೆನಪಿಲ್ಲ. ಪುರಾತತ್ವ ಇಲಾಖೆಯವರು ನಿರಾಕ್ಷೇಪಣಾ ಪತ್ರ ನೀಡುವ ಸಂದರ್ಭದಲ್ಲಿ ಹೊಸದಾಗಿ ತಳಪಾಯ ಹಾಕಿದ್ದಲ್ಲಿ ಪರವಾನಿಗೆ ರದ್ದು ಪಡಿಸುವಂತೆ ಷರತ್ತನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ಕಾರದ ನಿಯಮಗಳನ್ನು ಹಾಗೂ ಪರವಾನಿಗೆಯ ಷರತ್ತುಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿದ್ದ ಕಾರಣ ನನಗೆ ನೀಡಲಾಗಿದ್ದ ಪರವಾನಿಗೆಯನ್ನು ಪ್ರತಿವಾದಿಯು ರದ್ದು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ನಿ.ಪಿ. 3 ರಿಂದ 8 ವರೆಗಿನ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡುವ ಅವಶ್ಯಕತೆ ಇದೆ ಎಂದು ತಿಳಿಸಿದ್ದು, ಸಾಕ್ಷಿದಾರರು ಮೂಲ ದಾಖಲಾತಿಗಳನ್ನು ತಂದಿಗದೆ ಇರುವುದರಿಂದ ಮುಂದಿನ ದಿನಾಂಕದಂದು ನಿ.ಪಿ. 3 ರಿಂದ 8 ರ ವರೆಗಿನ ದಾಖಲಾತಿಯ ಮೂಲ ಪ್ರತಿಯನ್ನು ಹಾಜರು ಪಡಿಸುವಂತೆ ಸೂಚಿಸಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ